ರೂಪಾಯಿಗಳನ್ನು ಇಟ್ಟ ನಂತರ ಇವರು ಹನ್ನೊಂದುವರೆ ಲಕ್ಷ ಜನರಿಗೆ ಯಾವ ರೀತಿಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಾರೆ? ಮನೆ ಕಟ್ಟಿಕೊಡುವುದು ಬೇರೆ ಸಂಗತಿ. ಅದು ಆಶ್ರಯ ಯೋಜನೆಯಡಿಯಲ್ಲಿ ಬರುತ್ತದೆ. ಇದು ಒಳ್ಳೆಯ ಕಾರ್ಯಕ್ರಮ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಕೊಳಚೆ ನಿರ್ಮೂಲನಾ ಮಂಡಳಿಯ ಅಭಿವೃದ್ಧಿ ಕಾರ್ಯಗಳಿಗೆ ಇವರು ಕೋಟ್ಯಾಂತರ ರೂಪಾಯಿಗಳನ್ನು ಕೊಡದೇ ಹೋದರೆ ಲಕ್ಷಾಂತರ ಜನರು ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡುವುದಕ್ಕಾಗುವುದಿಲ್ಲ. ಆ ಪ್ರದೇಶಗಳಲ್ಲಿ ಹಂದಿಗಳೂ ಕೂಡ ವಾಸ ಮಾಡುವುದಕ್ಕೆ ಇಷ್ಟ ಪಡುವುದಿಲ್ಲ. ಅವು ಅಂತಹ ಜಾಗಗಳಾಗಿವೆ. ಅಲ್ಲಿ ಬಹಳಷ್ಟು ದುರ್ವಾಸನೆ ಇದೆ, ಅಲ್ಲದೆ, ಇಂತಹ ಕಡೆ ಕಾರ್ಪೋರೇಷನ್‌ನವರೂ ಕೆಲಸ ಮಾಡುವುದಿಲ್ಲ. ಇವರು ದುಡ್ಡನ್ನು ಬಿಡುಗಡೆ ಮಾಡಲು ದುಡ್ಡು ಇಲ್ಲವೆಂದು ಹೇಳುತ್ತಿದ್ದಾರೆ. ಅದಕ್ಕೋಸ್ಕರ ನಾನು ಹೇಳುತ್ತಿರುವುದು: ಈ ಅಭಿವೃದ್ಧಿ ಕಾರ್ಯಗಳಿಗೆ ತಾವು ಹಣವನ್ನು ಖರ್ಚು ಮಾಡಬೇಕು. ಆಶ್ರಯ ಯೋಜನೆಯಡಿಯಲ್ಲಿ ಮನೆಗಳನ್ನು ಕಟ್ಟಿಕೊಡುತ್ತಿದ್ದೀರಿ. ಬಹಳ ಸಂತೋಷ. ಈಗ ಹನ್ನೊಂದುವರೆ ಲಕ್ಷ ಕೊಳಚೆ ನಿವಾಸಿಗಳಿದ್ದಾರೆ. ಅವರಿಗೆ ಹಣವನ್ನು ಜಾಸ್ತಿ ಬಿಡುಗಡೆ ಮಾಡಿ ಎಂದು ತಮ್ಮನ್ನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕೆ. ಜೆ. ಜಾರ್ಜ್:- ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಈಗಾಗಲೇ ನಾನು ಉತ್ತರ ಕೊಟ್ಟಿದ್ದೇನೆ. ನಾವು ಮೂಲಭೂತ ಸೌಕರ್ಯಗಳನ್ನು ಎಷ್ಟೇ ಕೊಟ್ಟರೂ ಸಹ ಕೊಳಚೆ ನಿವಾಸಿಗಳ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ತಮಗೆ ಗೊತ್ತಿರುವ ಹಾಗೆ ಈ ವಿಚಾರದಲ್ಲಿ ಯಾವುದೇ ಒಂದು ಪ್ಲಾನ್ ಇರುವುದಿಲ್ಲ. ಎಷ್ಟೇ ಕಷ್ಟಪಟ್ಟರೂ ಸಹ ನಾವು ಒಳಚರಂಡಿ ವ್ಯವಸ್ಥೆ ಮಾಡಬಹುದು ಅಥವಾ ಬೋರ್‌ವೆಲ್‌ಗಳನ್ನು ಕೊಡಿಸಬಹುದು. ಆದರೆ ಮಾನ್ಯ ಸದಸ್ಯರ ಕ್ಷೇತ್ರದಲ್ಲಿ ಈಗ ಸುಮಾರು ೧೦೦೦ ಮನೆಗಳನ್ನು ಕಟ್ಟಿಕೊಟ್ಟರೆ ಬಹಳಷ್ಟು ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ, ಈ ಒಂದು ಪರ್ಮನೆಂಟ್ ಸಲ್ಯೂಷನ್ ಅನ್ನು ಅವರು ಉಪಯೋಗಿಸಿಕೊಂಡರೆ ತುಂಬಾ ಅನುಕೂಲವಾಗುತ್ತದೆ.

ಕಿರು ನೀರು ಸರಬರಾಜು ಯೋಜನೆಗಳ ಜಾರಿ ಬಗ್ಗೆ.

೨೦೬೭ ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಯನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಕೊಳಚೆ ಪ್ರದೇಶಗಳ ಸಂಖ್ಯೆ ಎಷ್ಟು?

ಆ) ಈ ಕೊಳಚೆ ಪ್ರದೇಶದಲ್ಲಿ ವಾಸಿಸುತ್ತಿರುವ ಕುಟುಂಬಗಳ ಸಂಖ್ಯೆ ಎಷ್ಟು?

ಇ) ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯು ಕಿರು ನೀರು ಸರಬರಾಜು ಯೋಜನೆಯಡಿಯಲ್ಲಿ ಈ ಕೊಳಚೆ ಪ್ರದೇಶಗಳಿಗಾಗಿ ಕಿರು ನೀರಿನ ಟ್ಯಾಂಕ್‌ಗಳನ್ನು ಕಟ್ಟಿದೆಯೇ?

ಈ) ಹಾಗಿದ್ದಲ್ಲಿ ೧೯೯೧-೯೨ರ ಸಾಲಿನಲ್ಲಿ ಕಟ್ಟಿರುವ ನೀರಿನ ಟ್ಯಾಂಕ್‌ಗಳ ಸಂಖ್ಯೆ ಎಷ್ಟು?

ಉ) ಈ ತನಕ ಖರ್ಚು ಮಾಡಿರುವ ಹಣ ಎಷ್ಟು?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

ಆ) ೨೯ ಕೊಳಚೆ ಪ್ರದೇಶಗಳನ್ನು ಗುರುತಿಸಿದೆ. ಇವುಗಳ ಪೈಕಿ ೨೬ ಕೊಳಚೆ ಪ್ರದೇಶಗಳು ಕರ್ನಾಟಕ ಕೊಳಚೆ ನಿರ್ಮೂಲನಾ ಕಾಯ್ದೆ ೧೯೭೩ರ ಪ್ರಕಾರ ಘೋಷಿತವಾಗಿದೆ.

ಆ) ೧೯೮೫-೮೬ರಲ್ಲಿ ನಡೆಸಿದ ಆರ್ಥಿಕ ಮತ್ತು ಸಾಮಾಜಿಕ ಸಮೀಕ್ಷೆ ಪ್ರಕಾರ ೪೭೮೧ ಕುಟುಂಬಗಳು ವಾಸಿಸುತ್ತಿವೆ.

ಇ) ಹೌದು.

ಈ) ಎರಡು. ೧) ಸರ್ವೆ ನಂ. ೭ ತಾವರೆಕೆರೆಯಲ್ಲಿ ಒಂದು ಟ್ಯಾಂಕನ್ನು ಕಟ್ಟಲಾಗಿದೆ. ೨) ಸರ್ವೆ ನಂ. ೫ ತಾವರೆಕೆರೆಯಲ್ಲಿ ಇನ್ನೂ ಕೆಲಸ ಪ್ರಾರಂಭಿಸಬೇಕಾಗಿರುತ್ತದೆ.

ಉ) ರೂ. ೫೬,೦೦೦-೦೦ ಗಳು.

ಶ್ರೀ ರಾಮಲಿಂಗರೆಡ್ಡಿ:- ಮಾನ್ಯ ಉಪಾಧ್ಯಕ್ಷಣಿಯವರೇ, ಜಯನಗರ ಕ್ಷೇತ್ರದಲ್ಲಿ ೨೯ ಕೊಳಚೆ ಪ್ರದೇಶಗಳನ್ನು ಕೊಳಚೆ ನಿರ್ಮೂಲನಾ ಮಂಡಳಿಯವರು ಗುರುತಿಸಿದ್ದು, ಅವುಗಳಲ್ಲಿ ೨೬ ಕೊಳಚೆ ಪ್ರದೇಶಗಳನ್ನು ನೋಟಿಫೈ ಮಾಡಿದ್ದಾರೆ. ೧೯೮೫-೮೬ರಲ್ಲಿ ನಡೆಸಿದ ಆರ್ಥಿಕ ಮತ್ತು ಸಾಮಾಜಿಕ ಸಮೀಕ್ಷೆ ಪ್ರಕಾರ ಅಲ್ಲಿ ಸುಮಾರು ೪೭೮೧ ಕುಟುಂಬಗಳಿವೆ. ಈಗ ಆರು ವರ್ಷಗಳ ಅಂತರದಲ್ಲಿ ೨೦೦೦-೩೦೦೦ ಕುಟುಂಬಗಳು ಜಾಸ್ತಿಯಾಗಿದ್ದು, ಅಲ್ಲಿ ಒಟ್ಟು ಸುಮಾರು ೭೦೦೦-೮೦೦೦ ಕುಟುಂಬಗಳಿವೆ. ಇವರಿಗೆ ಕಿರು ನೀರಿನ ಟ್ಯಾಂಕುಗಳನ್ನು ಕಟ್ಟಿದ್ದಾರೆಯೇ ಎಂಬ ಪ್ರಶ್ನೆಗೆ ಉತ್ತರವಾಗಿ ಎರಡು ಕಿರು ನೀರಿನ ಟ್ಯಾಂಕುಗಳನ್ನು ಕಟ್ಟಲಾಗಿದೆಯೆಂದೂ, ಒಂದನ್ನು ಈಗಾಗಲೇ ಕಟ್ಟಿದೆಯೆಂದೂ, ಇನ್ನೊಂದು ಪ್ರಾರಂಭಿಸಬೇಕಾಗಿದೆ ಎಂದು ಹೇಳಿದ್ದಾರೆ. ಈ ೭೦೦೦ ಕುಟುಂಬಗಳಿಗೆ ಬರೀ ಎರಡು ಕಿರು ನೀರಿನ ಟ್ಯಾಂಕುಗಳು ಸಾಕೇ? ಇವರಿಗೆ ಇನ್ನೂ ಸಾಕಷ್ಟು ಬೋರ್‌ವೆಲ್‌ಗಳು ಬೇಕಾಗಿವೆ. ಈಗ ಕೆಲವು ಬೋರ್‌ವೆಲ್‌ಗಳಿವೆ. ಅವನ್ನು ಕಾರ್ಪೊರೇಷನ್ ವತಿಯಿಂದ, ಕೊಳಚೆ ನಿರ್ಮೂಲನ ಮಂಡಳಿಯ ವತಿಯಿಂದ ಹಾಕಿದ್ದಾರೆ. ಏಕೆಂದರೆ ಹಿಂದಿನ ವರ್ಷಗಳಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯಲ್ಲಿ ಹಣವಿರಲಿಲ್ಲ. ಆ ಕಾರಣ ಕಾರ್ಪೊರೇಶನ್‌ನವರ ಮೇಲೆ ಇದರ ಬಗ್ಗೆ ಒತ್ತಡವನ್ನು ಹಾಕಿ ಅಲ್ಲಿಂದ ಸಾಕಷ್ಟು ಬೋರ್‌ವೆಲ್‌ಗಳನ್ನು ಹಾಕಿಸಿದ್ದೇವೆ. ಆದರಲ್ಲಿಯೂ ಒಂದು ಸಾವಿರ ಗ್ಯಾಲನ್‌ಗಳಿಗಿಂತ ಹೆಚ್ಚು ನೀರು ಬರತಕ್ಕವುಗಳಲ್ಲಿ ಆದು ಕಾರ್ಪೊರೇಷನ್‌ನ ಬೋರ್‌ವೆಲ್ ಆಗಿರಲಿ ಅಥವಾ ಕೊಳಚೆ ನಿರ್ಮೂಲನಾ ಮಂಡಳಿಯ ಬೋರ್‌ವೆಲ್‌ಗಳಾಗಿರಲ್ಲಿ, ಅಲ್ಲಿ ಮಿನಿ ವಾಟರ್ ಸ್ಕೀಮ್‌ನ್ನು ಜಾರಿಗೆ ತರಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

ಶ್ರೀ ಕೆ. ಜೆ. ಜಾರ್ಜ್:- ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ಈಗಾಗಲೇ ಬೆಂಗಳೂರು ನೀರು ಸರಬರಾಜು ಮಂಡಳಿಯವರಿಂದ, ಕಾರ್ಪೊರೇಷನ್‌ನವರಿಂದ, ಬೆಂಗಳೂರಿನಲ್ಲಿ ಸುಮಾರು ೬೫೦ ರಿಂದ ೭೦೦ ಕೊಳವೆ ಭಾವಿಗಳನ್ನು ಹಾಕಿಸಿದ್ದೇವೆ. ಎಲ್ಲೆಲ್ಲಿ ಒಂದು ಸಾವಿರ ಗ್ಯಾಲನ್‌ಗಳಿಗಿಂತ ಹೆಚ್ಚು ನೀರು ಬರುತ್ತದೋ ಅಂಥ ಕಡೆ ಕಿರು ನೀರಿನ ಯೋಜನೆಯನ್ನು ಕೈಗೊಳ್ಳಲು ಈಗಾಗಲೇ ಕ್ರಮವನ್ನು ತೆಗೆದುಕೊಂಡಿದ್ದು ಬಹುಶಃ ಬೆಂಗಳೂರು ನೀರು ಸರಬರಾಜು ಮಂಡಳಿಯ ವತಿಯಿಂದ ಹಾಕಿರತಕ್ಕ ಬೋರ್‌ವೆಲ್‌ಗಳಲ್ಲಿ ಎಲ್ಲಿ ಒಂದು ಸಾವಿರಕ್ಕಿಂತ ಹೆಚ್ಚು ನೀರು ಬಂದಿದೆಯೋ ಅದೆಲ್ಲವನ್ನೂ ಸಂಪೂರ್ಣವಾಗಿ ಪೂರ್ತಿಗೊಳಿಸಿದ್ದಾರೆ. ಮತ್ತೆ ಕಾರ್ಪೊರೇಷನ್‌ನವರೂ ಸಹಿತ ಸುಮಾರು ೨೦೦ ಕೊಳವೆ ಬಾವಿಗಳಲ್ಲಿ ಒಂದು ಸಾವಿರ ಗ್ಯಾಲನ್‌ಗಳಿಗಿಂತ ಹೆಚ್ಚು ನೀರು ಬರುವುದರಲ್ಲಿ ಕಿರು ನೀರಿನ

ಯೋಜನೆಯನ್ನು ತೆಗೆದುಕೊಳ್ಳಲು ಈಗಾಗಲೇ ಕಾರ್ಯಕ್ರಮವನ್ನು ಹಾಕಿದ್ದಾರೆ. ಕೊಳಚೆ ಪ್ರದೇಶಗಳಲ್ಲೂ ಸಹಿತ ಎಲ್ಲೆಲ್ಲಿ ಒಂದು ಸಾವಿರಕ್ಕಿಂತ ಹೆಚ್ಚು ಗ್ಯಾಲನ್‌ಗಳಷ್ಟು ನೀರು ಕೊಳವೆ ಬಾವಿಗಳಲ್ಲಿ ಬಂದಿರುತ್ತದೋ ಅಲ್ಲೂ ಸಹ ಕಾರ್ಪೊರೇಷನ್‌ನ ನೆರವಿನಿಂದ ಕೊಳಚೆ ನಿರ್ಮೂಲನಾ ಮಂಡಳಿಯವರು ಕಿರು ನೀರಿನ ಯೋಜನೆಯನ್ನು ತೆಗೆದುಕೊಳ್ಳಲು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ.

ಶ್ರೀ ಕೆ. ಲಕ್ಕಣ್ಣ:- ಉಪಾಧ್ಯಕ್ಷಣಿಯವರೇ, ನಮ್ಮ ಕೊಳಚೆ ಪ್ರದೇಶಗಳಲ್ಲಿ ಈಗಾಗಲೇ ಕಿರು ನೀರಿನ ಯೋಜನೆಯನ್ನು ಜಾರಿ ಮಾಡಿದ್ದಾರೆ. ಆದರೆ ಆ ನೀರಿನ ಟ್ಯಾಂಕ್ ಈಗ ಒಡೆದು ಹೋಗಿದೆ. ಇದರ ಬಗ್ಗೆ ಅಂದಾಜು ಮಾಡಿ ಸರಿಪಡಿಸಿಕೊಡಬೇಕೆಂದು ಹೇಳಿದ್ದೆ, ಆದರೆ ಅದನ್ನು ಮಾಡಿಲ್ಲ, ದಯವಿಟ್ಟು ಅದನ್ನು ಸರಿಮಾಡಿಸಬೇಕು.

ಶ್ರೀ ರಾಮಲಿಂಗರೆಡ್ಡಿ:- ಉಪಾಧ್ಯಕ್ಷಣಿಯವರೇ, ಏನು ೨೬ ಘೋಷಿತ ಕೊಳಚೆ ಪ್ರದೇಶಗಳಿವೆ ಅದರಲ್ಲಿ ಎರಡರಲ್ಲಿ ಮಾತ್ರ ಈ ಕಿರು ನೀರಿನ ಯೊಜನೆಯನ್ನು ಮಾಡುತ್ತೇವೆಂದು ಹೇಳಿದ್ದಾರೆ. ಆ ಎರಡರಲ್ಲಿ ಮಾತ್ರ ಅವರಿಗೆ ಸಾವಿರ ಗ್ಯಾಲನ್ ನೀರು ಸಿಕ್ಕಿದೆಯಾ? ಇನ್ನೂ ಸಾಕಷ್ಟು ಅಂದರೆ ಸುಮಾರು ೧೦-೧೫ ಬೋರ್‌ವೆಲ್‌ಗಳಲ್ಲಿ ಒಂದು ಸಾವಿರ ಗ್ಯಾಲನ್‌ಗಿಂತ ಹೆಚ್ಚು ನೀರು ಇದೆ. ಆ ಬೋರ್‌ವೆಲ್‌ಗಳನ್ನು ಬಿ. ಡಿ. ಎ. ನವರು, ಬಿ. ಡಬ್ಲ್ಯೂ. ಎಸ್. ಎಸ್. ಬಿ. ಯವರು, ಕಾರ್ಪೊರೇಷನ್‌ನವರು, ಕೊಳಚೆ ನಿರ್ಮೂಲನಾ ಮಂಡಳಿಯವರು ಹೀಗೆ ಯಾರೇ ಅದನ್ನು ಹಾಕಿರಲಿ, ನೀವು ಈ ಕಿರು ನೀರಿನ ಯೋಜನೆಯನ್ನು ಮಾಡಲು ಕೊಳಚೆ ನಿರ್ಮೂಲನಾ ಮಂಡಳಿಯವರಿಗೆ ಅಧಿಕಾರವನ್ನು ಕೊಡಬೇಕು. ಕೊಳಚೆ ಪ್ರದೇಶದಲ್ಲಿ ಯಾರದೇ ಬೋರ್‌ವೆಲ್ ಆಗಿರಲಿ ಅಲ್ಲಿ ಕಿರು ನೀರಿನ ಯೋಜನೆಯನ್ನು ಮಾಡಲು ಕೊಳಚೆ ನಿರ್ಮೂಲನಾ ಮಂಡಳಿಯವರಿಗೆ ಅವಕಾಶವನ್ನು ಮಾಡಿಕೊಡಿ.

ಶ್ರೀ ಕೆ. ಜೆ. ಜಾರ್ಜ್:- ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ಇದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ ಈ ಕೆಲಸವನ್ನು ಕಾರ್ಪೊರೇಷನ್ ವತಿಯಿಂದ ಮಾಡಬೇಕಾಗಿತ್ತು. ಆದರೆ ಅವರು ಅದನ್ನು ಮಾಡಲಿಲ್ಲ. ಈ ಕಿರು ನೀರಿನ ಯೋಜನೆಯನ್ನು ಅವರು ತೆಗೆದುಕೊಳ್ಳುತ್ತಾರೆ. ಆದಷ್ಟು ಬೇಗ ಅದನ್ನು ಅವರು ತೆಗೆದುಕೊಳ್ಳುವಂತೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತೆ ಶ್ರೀಮಾನ್ ಲಕ್ಕಣ್ಣನವರು ಕೊಳಚೆ ಪ್ರದೇಶದಲ್ಲಿ ಕಟ್ಟಿರತಕ್ಕ ಒಂದು ನೀರಿನ ಟ್ಯಾಂಕ್ ಒಡೆದು ಹೋಗಿದೆ ಎಂದು ಹೇಳಿದ್ದಾರೆ. ಅದನ್ನು ಆದಷ್ಟು ಬೇಗ ದುರಸ್ಥಿಗೊಳಿಸಲು ಆದೇಶವನ್ನು ಕೊಡುತ್ತೇನೆ.

ಶ್ರೀ ರಾಮಲಿಂಗ ರೆಡ್ಡಿ:- ಇನ್ನೊಂದು ವಿಷಯವಿದೆ.

ಉಪಾಧ್ಯಕ್ಷಣಿಯವರು:- ತಮ್ಮದು ಮೂರು ಪ್ರಶ್ನೆಯಾಯಿತು. ಇನ್ನೂ ೮ ಪ್ರಶ್ನೆಗಳಿವೆ. ಆದರೆ ಸಮಯವಿರುವುದು ೧೫ ನಿಮಿಷ ಮಾತ್ರ. ಹೀಗಾದರೆ ಕೊನೆಯಲ್ಲಿ ಪ್ರಶ್ನೆಯನ್ನು ಕೇಳುವವರಿಗೆ ಸಮಯವೇ ಸಿಗುವುದಿಲ್ಲ.

ಖಾಸಗಿ ಬಡಾವಣೆಗಳಿಗೆ ಅನುಮತಿ ನೀಡುವ ಬಗ್ಗೆ

೨೦೬೫. ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?